

## ಮನೆ ಬಾಗಿಲಿಗೆ ಮಸಾಲೆ ಗಿರಣಿ

ಮನೆಯ ಮಂದಿಗಷ್ಟೇ ಬಾಡೂಟದ ಮಸಾಲೆ ಅರೆಯಲು ಮಿಕ್ಸಿಯನ್ನು ಬಳಸುವುದು ಸಹಜ. ಆದರೆ ಸಭೆ ಸಮಾರಂಭಗಳಿಗೆ ಮಸಾಲೆ ರುಬ್ಬಲು ಮಿಕ್ಸಿಯ ಜಾಗಕ್ಕೆ ದೊಡ್ಡ ದೊಡ್ಡ ಗ್ರೈಂಡರ್‌ಗಳು ಬರುತ್ತವೆ. ಸಾಮಾನ್ಯವಾಗಿ ಈ ಗ್ರೈಂಡರ್‌ಗಳನ್ನು ಬಾಡಿಗೆಗೆ ತರುವುದುಂಟು. ಆದರೆ, ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಚಿಕ್ಕೌಂಸಿ ಹೊಸೂರು ಗ್ರಾಮದ ಉಮೇಶ ಕಲಾಲ್ ಅವರು ತಮ್ಮ ಟ್ರಾಕ್ಟರಿಗೆ ಮಸಾಲೆ ರುಬ್ಬುವ ಗಿರಣಿಯನ್ನು ಜೋಡಿಸಿದ್ದು, ಇದರ ಮೂಲಕ ದೊಡ್ಡ ದೊಡ್ಡ ಪ್ರಮಾಣದ ಮಸಾಲೆಯನ್ನು ರುಬ್ಬಿಕೊಡುವ ಕಾಯಕವನ್ನೇ ಶುರು ಮಾಡಿದ್ದಾರೆ. ಅದು ಮನೆಮನೆ ಬಾಗಿಲಿಗೆ ಹೋಗಿ ಎನ್ನುವುದು ವಿಶೇಷ. ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಕರಿಮೆಣಸು, ಹಸಿಮೆಣಸು, ಗರಂಮಸಾಲ, ಮೆಣಸಿನಕಾಯಿ ಪುಡಿ, ಧನಿಯ ಪುಡಿ ಹೀಗೆ ಗ್ರಾಹಕರಿಗೆ ಬೇಕಾದ ಮಸಾಲೆ ಪದಾರ್ಥಗಳನ್ನು ಸ್ವಚ್ಛವಾಗಿ ತೊಳೆದು ಕೊಟ್ಟರೆ ಅದನ್ನು ಮಸಾಲೆಯಾಗಿ ಪರಿವರ್ತಿಸಿಕೊಡುತ್ತಾರೆ. ಅದಕ್ಕಾಗಿ ಪ್ರತಿ ಕೆ.ಜಿ.ಗೆ ₹25 ಪಡೆಯುತ್ತಾರೆ. ಗ್ರಾಮೀಣ ಭಾಗದ ಯುವಕರೂ ಇಂಥ ವಿನೂತನ ಪ್ರಯತ್ನಕ್ಕೆ ಮುಖಮಾಡಿರುವುದನ್ನು ಕಂಡು ಖುಷಿಯಾಯಿತು.

–ರಘುನಾಥರಾವ್ ತಾಪ್ಸೆ, ದಾವಣಗೆರೆ

## ಧವಳಪ್ಪನ ಬೆಟ್ಟ

ಕೋಟೆ ನಾಡು ಚಿತ್ರದುರ್ಗದ ಚಂದ್ರವಳ್ಳಿ ಕೆರೆಗೆ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಧವಳಪ್ಪನ ಬೆಟ್ಟವು ಸಾಹಸಿ ಯುವಕರು ಮತ್ತು ಚಾರಣ ಪ್ರಿಯರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ಈ ಬೆಟ್ಟವು ಬೃಹತ್ ಬಂಡೆಕಲ್ಲುಗಳಿಂದ ಸಂರಚಿತವಾಗಿದ್ದು, ಬೆಟ್ಟ ಹತ್ತಲು ಮುಂಜಾನೆ ಬಹಳ ಸೂಕ್ತ ಸಮಯ. ಬೆಟ್ಟವನ್ನು ಹತ್ತುವ ದಾರಿಯೂ ಅಷ್ಟೇನೂ ಸುಗಮವಾಗಿಲ್ಲ. ಬಂಡೆಗಲ್ಲುಗಳನ್ನು ಬಳಸಿ ಹತ್ತಲು ಮೆಟ್ಟಿಲುಗಳನ್ನು ನಿರ್ಮಿಸಿದ್ದು, ಅವೂ ಹಾಳಾಗಿವೆ. ಬೆಟ್ಟವೇರಲು ಸುಲಭವಾಗಲೆಂದು ಹಾಕಿದ್ದ ಕಬ್ಬಿಣದ ಸರಳುಗಳ ರೈಲಿಂಗ್ ಸಹ ಹಾಳಾಗಿದೆ. ಇಲ್ಲಿಗೆ ಬರುವ ಬಹುತೇಕರು ಬೆಟ್ಟದ ಅರ್ಧಭಾಗವನ್ನು ಬಲು ಉತ್ಸಾಹದಿಂದ ಹತ್ತುತ್ತಾರೆ. ಅರ್ಧ ತಲುಪಿದ ಬಳಿಕ ಉತ್ಸಾಹ ಕಳೆದುಕೊಂಡು ಠುಸ್ ಪಟಾಕಿಯಾಗುತ್ತಾರೆ. ಉಳಿದ ಅರ್ಧ ಭಾಗವನ್ನೇರಲು ತುಂಬ ಕಷ್ಟ. ಆದರೂ ಪಟ್ಟು ಬಿಡದೆ ಬೆಟ್ಟದ ತುದಿ ತಲುಪಿದರೆ ಭರದಿಂದ ಬೀಸುವ ತಂಗಾಳಿಯು ಮನಸ್ಸಿಗೆ ಮುದ ನೀಡುತ್ತದೆ. ದೇಹವನ್ನು ತಣಿಸುತ್ತದೆ. ಅಲ್ಲಿಂದ ಕಾಣುವ ಹಸಿರು ಬೆಟ್ಟ ಗುಡ್ಡಗಳ ದೃಶ್ಯ, ಚಿತ್ರದುರ್ಗ ನಗರ, ಚಂದ್ರವಳ್ಳಿ ಕೆರೆ ಇವುಗಳ ಸುಂದರ ನೋಟ ಕಣ್ಣುಗಳಿಗೆ ಹಬ್ಬದೂಟವನ್ನು ಉಣಬಡಿಸುತ್ತದೆ. ಬೆಟ್ಟವನ್ನು ಹತ್ತಿದ ಆಯಾಸವೆಲ್ಲ ಕ್ಷಣದಲ್ಲಿ ಮಾಯ. ಅಷ್ಟು ಎತ್ತರದ ಬೆಟ್ಟದ ಮೇಲೆ ಹಾಸು ಬಂಡೆಗಳನ್ನು ಕೊರೆದು ಶಿವಲಿಂಗಗಳನ್ನು ಕೆತ್ತಿರುವುದು ವಿಶೇಷವಾಗಿ ಕಾಣುತ್ತದೆ. ಅಲ್ಲದೆ ಬೆಟ್ಟದ ಮೇಲೆ ಗವಿಯೊಂದು ಇದ್ದು ಅದರ ಒಳಗೆ ಸುಂದರವಾದ ಶಿವಲಿಂಗವನ್ನು ಕೆತ್ತಲಾಗಿದೆ. ಭಕ್ತರು ಅಲ್ಲಿ ಪೂಜೆಯನ್ನೂ ಸಲ್ಲಿಸುತ್ತಾರೆ. ಬೆಟ್ಟದ ಮೇಲಣ ಮಳೆ ನೀರು ಶೇಖರಣೆ ಮಾಡಲು ಬಂಡೆಗಳ ಸಂದುಗಳಲ್ಲಿ ಒಂದು ಕೊಳವನ್ನೂ ನಿರ್ಮಿಸಲಾಗಿದ್ದು, ಅದರಲ್ಲಿ ಸದಾ ನೀರು ಇರುತ್ತದೆ. ಬೆಟ್ಟ ಹತ್ತುವ ಮಾರ್ಗವನ್ನು ಸುಗಮಗೊಳಿಸಿದರೆ ಪ್ರವಾಸಿಗರ ಗಮನ ಸೆಳೆಯುವುದರಲ್ಲಿ ಎರಡು ಮಾತಿಲ್ಲ.

–ಪ. ಚಂದ್ರಕುಮಾರ, ಗೌನಹಳ್ಳಿ







## ಹರಕೆಯ ಘಂಟೆ

ದಕ್ಷಿಣಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಸೌತಡ್ಕ ಮಹಾಗಣಪತಿ ದೇವಸ್ಥಾನ ಕೆಲವೊಂದು ವೈಶಿಷ್ಟ್ಯಗಳಿಂದ ಕೂಡಿದೆ. ಗರ್ಭಗುಡಿ ರಹಿತ ಬಯಲು ಆಲಯ ಇಲ್ಲಿನ ವಿಶೇಷ. ತಮ್ಮ ಇಷ್ಟಾರ್ಥ ಕೈಗೂಡಿದರೆ ಹರಕೆಯ ರೂಪದಲ್ಲಿ ಘಂಟೆಗಳನ್ನು ಅರ್ಪಿಸುವುದು ಇಲ್ಲಿನ ವಾಡಿಕೆ. ಹೀಗಾಗಿಯೇ ಈ ದೇವಸ್ಥಾನಕ್ಕೆ ಘಂಟೆ ಗಣಪ ಎಂಬ ಹೆಸರೂ ಇದೆ. ಹರಕೆಯ ರೂಪದಲ್ಲಿ ಅರ್ಪಿತವಾದ ಸಾವಿರಾರು ಘಂಟೆಗಳು ಆಲಯದ ಸುತ್ತಲೂ ನಮ್ಮನ್ನು ಆಕರ್ಷಿಸುತ್ತವೆ. ಮಹಾಗಣಪತಿಯ ದರ್ಶನವನ್ನು ಇಲ್ಲಿ ನೀವು ಬೆಳಿಗ್ಗೆಯಿಂದ ಸಂಜೆಯವರೆಗೆ ಎಪ್ಪತ್ತು ರೂಪಾಯಿಗೆ ಬೋಗುಣಿ ತುಂಬ ತುಂಬಿಕೊಡುವ ಇಲ್ಲಿನ ಅವಲಕ್ಕಿ ಪಂಚಕಜ್ಜಾಯ ಪ್ರಸಾದ ಅತಿರುಚಿ.

–ಧರ್ಮಾನಂದ ಶಿರ್ವ, ಬೆಂಗಳೂರು

## ಮೈಸೂರಲ್ಲಿ ಮಂಗನಿಂದ ಮಾನವ

'ಮಂಗನಿಂದ ಮಾನವ' ಎನ್ನುವುದು ಡಾರ್ವಿನ್‌ನ ಪ್ರಸಿದ್ಧ ಪ್ರತಿಪಾದನೆ. 60 ಲಕ್ಷ ವರ್ಷಗಳ ಹಿಂದೆ ಮನುಷ್ಯನ ಪೂರ್ವಜರು ವಿವಿಧ ರೂಪಾಂತರಗಳನ್ನು ಹೊಂದಿ ಇಂದಿನ ಹೋಮೋ ಸೆಪಿಯನ್ಸ್ ಎಂದು ಕರೆಯುವ ಮಾನವನ ರೂಪಕ್ಕೆ ವಿಕಾಸ ಹೊಂದಿದ್ದಾರೆ. ಮೈಸೂರಿನ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಚೇರಿಯ ಮುಂಭಾಗದಲ್ಲಿ ಮನುಷ್ಯನ ವಿವಿಧ ರೂಪಾಂತರಗಳ ಪ್ರತಿಕೃತಿಗಳನ್ನು ತುಂಬಾ ಸೊಗಸಾಗಿ ಸಾದರ ಪಡಿಸಲಾಗಿದೆ. ಪ್ರತಿಮೆಗಳ ಮುಂದೆ ನಿಂತು ಸೂಕ್ಷ್ಮಚಿತ್ತದಿಂದ ನೋಡಿದರೆ ನಮ್ಮ ಹಿಂದಿನ ನಿಜವಾದ ರೂಪ ಇದೇನಾ ಎಂದು ಮನಸ್ಸಿಗೆ ನಾಟುತ್ತದೆ. ಮುಂಗಾಲು ಕೈಯಾಗಿ ಬಳಕೆಯಾದ ಬಗೆ, ಭಂಗಿಗಳಲ್ಲಿ ಆದ ಬದಲಾವಣೆಗಳನ್ನು ನೆನೆದರೆ ಮೈ ರೋಮಾಂಚನಗೊಳ್ಳುತ್ತದೆ. ಪುಟ್ಟ ಮಕ್ಕಳಿಗೆ ಈ ಪ್ರತಿಮೆಗಳ ಮೂಲಕ ಮಾನವನ ವಿಕಾಸವನ್ನು ವಿವರಿಸಬಹುದಾಗಿದೆ.

–ಅರುಣ್, ಕಿಲ್ಲೂರು

